E-MAIL jdmysore@gmail.com &
jdir_cce_kamy@yahoo.com
Website www.rjdcemys.in
Phone 0821-2426696
Fax 0821-2428696

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ :ಪ್ರಾಕಮ್ಯ/ಕಾಶಿಇ/೭೮೮ /ಖಾಹುಭ/ಖಾಕಾ/2017-18

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ವಿನೋಬ ರಸ್ತೆ, ಮೈಸೂರು-570 005
ದಿನಾಂಕ:06-10-2017.

# ಪರಿಚಲನಾದೇಶ

ಮೇಲ್ಕಂಡ ಸರ್ಕಾರದ ಪತ್ರವನ್ನು ವಲಯದ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಆಡಳಿತ ಮಂಡಳಿ/ಪ್ರಾಂಶುಪಾಲರುಗಳಿಗೆ ಪರಿಚಲಿಸುತ್ತಾ, ದಿನಾಂಕ 31-12-2015ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಯನ್ನು ಕಳುಹಿಸಿಕೊಡುವುದು.

1. ದಿನಾಂಕ 01-09-2017ರ ಸರ್ಕಾರದ ಪತ್ರದಲ್ಲಿ ವಿಧಿಸಿರುವ ಎಲ್ಲ ಷರತ್ತುಗಳನ್ನು ಸಂಬಂಧಪಟ್ಟ ಆಡಳಿತ ಮಂಡಳಿ/ಕಾಲೇಜಿನ ಪ್ರಾಂಶುಪಾಲರು ಪೂರೈಸಿರುವ/ಪೂರೈಸಿಲ್ಲದಿರುವ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳೊಂದಿಗೆ ಕಳುಹಿಸಿಕೊಡುವುದು.
2. ಪದವಿ ವಿಭಾಗದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹುದ್ದೆಗಳು ಹಸ್ತಾಂತಗೊಂಡಿದ್ದಲ್ಲಿ, ಅಂತಹ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕಾರಣಕ್ಕೂ ಪ್ರಸ್ತಾವನೆ ಸಲ್ಲಿಸಬಾರದು.
3. ಅನುದಾನಿತ ಕಾರ್ಯಭಾರದ ಕೊರತೆಯಿಂದ ಬೇರೆ ಕಾಲೇಜುಗಳಿಗೆ ಮರುಹಂಚಿಕೆ/ನಿಯೋಜನೆ ಹೊಂದಿರುವ ಬೋಧಕರ ಹುದ್ದೆಗಳಿಗೆ ಎದುರಾಗಿ ಖಾಲಿ ಹುದ್ದೆ ಇರುವುದಾಗಿ ಅಥವಾ ಅಂತಹ ಹುದ್ದೆಯನ್ನು ಭರ್ತಿ ಮಾಡಬಹುದಾಗಿರುತ್ತದೆ ಎಂಬ ಮಾಹಿತಿಯನ್ನು ನೀಡುವಂತಿಲ್ಲ.
4. ಸರ್ಕಾರದ ಆದೇಶ ಸಂಖ್ಯೆ : ಇಡಿ/357/ಯುಪಿಸಿ/2002, ದಿನಾಂಕ 19-12-2002ರಲ್ಲಿ ಗುರುತಿಸಿರುವ ಬ್ಯಾಕ್ ಲಾಗ್ ಹುದ್ದೆಗಳನ್ನು ನಿಯಮಾನುಸಾರ ಆದ್ಯತೆ ಮೇರೆಗೆ ಭರ್ತಿ ಮಾಡಲು ಅಗತ್ಯ ಕ್ರಮವಹಿಸುವುದು. ತದನಂತರ ಮಂಜೂರಾದ ಅನುದಾನಿತ ಖಾಲಿ ಹುದ್ದೆಗಳಿದ್ದಲ್ಲಿ ನಿಗಧಿತ ಅನುದಾನಿತ ಕಾರ್ಯಭಾರವಿದ್ದಲ್ಲಿ ಮಾತ್ರ ಅಂತಹ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮಕೈಗೊಳ್ಳುವುದು.
5. ಖಾಲಿ ಹುದ್ದೆ ಭರ್ತಿ ಮಾಡಲು ಈ ಕಚೇರಿಗೆ ಸಲ್ಲಿಸುವ ಕಾಲೇಜಿನ ಪ್ರತಿಯೊಂದು ವಿಷಯದ ಹುದ್ದೆಗೆ ಸಂಬಂಧಿಸಿದಂತೆ, ಮಂಜೂರಾದ ಹುದ್ದೆಗಳು, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಬಗ್ಗೆ ಪರಿಶೀಲಿಸಿ, ದೃಢೀಕೃತ ಮಾಹಿತಿ ನೀಡುವುದು(ಹುದ್ದೆಗಳು ಮಂಜೂರಾದ ಬಗ್ಗೆ, ಯಾವ ದಿನಾಂಕದಿಂದ, ಯಾರಿಂದ ಹಾಗೂ ಯಾವ ರೀತಿ ಹುದ್ದೆ ತೆರವಾಗಿದೆ ಎಂಬುದರ ಬಗ್ಗೆ ದೃಢೀಕೃತ ದಾಖಲೆಗಳೊಂದಿಗೆ ಮಾಹಿತಿ ನೀಡುವುದು)
6. ಪ್ರತಿಯೊಂದು ವಿಷಯದಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿರುವ ಅನುದಾನಿತ ಕಾರ್ಯಭಾರ, ಖಾಯಂ ಬೋಧಕರಿಗೆ ನಿಯಮಾನುಸಾರ ಹಂಚಿಕೆ ಮಾಡಿರುವ ಕಾರ್ಯಭಾರ ಹಾಗೂ ಉಳಿಕೆ ಕಾರ್ಯಭಾರ ಇವುಗಳ

ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಡಬ್ಲ್ಯೂ&ಎಸ್ ನಿಗಧಿತ ನಮೂನೆಯಲ್ಲಿ ದೃಢೀಕೃತ ಮಾಹಿತಿ ನೀಡುವುದು. (ಯಾವುದೇ ಕಾರಣಕ್ಕೂ ಅನುದಾನ ರಹಿತ ಕಾರ್ಯಭಾರವನ್ನು ಪರಿಗಣಿಸುವಂತಿಲ್ಲ) ಈ ಹುದ್ದೆಗಳಿಗೆ ಈವರೆಗೂ ಪಾಲಿಸಿರುವ ಮೀಸಲಾತಿ, ನಿಯಮಾನುಸಾರ ಪಾಲಿಸಬೇಕಾಗಿದ್ದ ಮೀಸಲಾತಿ ಹಾಗೂ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ನಿಗದಿಪಡಿಸಬೇಕಾಗಿರುವ ಮೀಸಲಾತಿ ಬಗ್ಗೆ ಮಾಹಿತಿ ನೀಡುವುದು. (ಪ್ರತಿಯೊಂದು ವಿಷಯಕ್ಕೆ ಪ್ರತ್ಯೇಕವಾಗಿ ದೃಢೀಕೃತ ಮೀಸಲಾತಿ ವರದಿ ಪಟ್ಟಿ ಸಲ್ಲಿಸುವುದು)

7. ಒಂದೇ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ವಿಷಯಕ್ಕೂ ಸದರಿ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ 2017–18ನೇ ಶೈಕ್ಷಣಿಕ ಸಾಲಿನ ಕಾಲೇಜುವಾರು ಅನುದಾನಿತ ಕಾರ್ಯಭಾರವನ್ನು ಪರಿಗಣಿಸುವುದು. ನಂತರ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕರಿಗೆ ನಿಯಮಾನುಸಾರ ಹಂಚಿಕೆ ಮಾಡಿರುವ ಕಾರ್ಯಭಾರ ಹಾಗೂ ಉಳಿಕೆ ಕಾರ್ಯಭಾರ ಇವುಗಳ ಬಗ್ಗೆ ಪರಿಶೀಲಿಸಿ, ದೃಢೀಕೃತ ಮಾಹಿತಿ ನೀಡುವುದು (ಡಬ್ಲ್ಯೂ&ಎಸ್ ನಮೂನೆಯಲ್ಲಿ) ಅದೇ ರೀತಿ ಮೀಸಲಾತಿಗೆ ಸಂಬಂಧಿಸಿದಂತೆ ಪ್ರತಿಯೊಂದು ವಿಷಯಕ್ಕೂ ಸದರಿ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಸಂಬಂಧಪಟ್ಟ ವಿಷಯದ ಮಂಜೂರಾದ ಹುದ್ದೆಗಳನ್ನು ಪರಿಗಣಿಸಿ, ಮೀಸಲಾತಿ ಬಗ್ಗೆ ಮಾಹಿತಿ ನೀಡುವುದು/ ಪ್ರತಿಯೊಂದು ವಿಷಯಕ್ಕೆ ಪ್ರತ್ಯೇಕವಾಗಿ ದೃಢೀಕೃತ ಮೀಸಲಾತಿ ವರದಿ ಪಟ್ಟಿ ಸಲ್ಲಿಸುವುದು.

8. ಮೇಲಿನ ಎಲ್ಲ ಅಂಶಗಳನ್ನು ಒಳಗೊಂಡಂತೆ ಮಾಹಿತಿಯನ್ನು ನಿಗಧಿತ ನಮೂನೆ–3ರ ಚೆಕ್‌ಲಿಸ್ಟ್ ನಲ್ಲಿ ಭರ್ತಿ ಮಾಡಿ ಸಲ್ಲಿಸುವುದು.

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು

ಇವರಿಗೆ,

1. ವಲಯದ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಆಡಳಿತ ಮಂಡಳಿಯ ಅಧ್ಯಕ್ಷರು/ ಕಾರ್ಯದರ್ಶಿಯವರುಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (ಪ್ರಾಂಶುಪಾಲರುಗಳ ಮುಖಾಂತರ)
2. ವಲಯದ ಎಲ್ಲ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿ:

1) ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ
2) ಕಚೇರಿ ಪ್ರತಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 240 ಯುಪಿಸಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ,
**ಬೆಂಗಳೂರು, ದಿನಾಂಕ:01-09-2017**

**ಇಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು.

**ಗೆ:**

ಕಾಲೇಜು ಶಿಕ್ಷಣ ಆಯುಕ್ತರು,
ಬೆಂಗಳೂರು.

ಮಾನ್ಯರೆ,

ವಿಷಯ: ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಕಾಶಿಇ/80/ಖಾಹುಮಾ/2014-15/ನೇ.ವಿ-2, ದಿನಾಂಕ:12-12-2014, 25-2-2016, 20-6-2016, 29-07-2016, 10-11-2016, 08-3-2017, ಹಾಗೂ 22-3-2017.

(*****)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರ ಹಾಗೂ ಪ್ರಸ್ತಾವನೆಗಳನ್ನು ಪರಿಶೀಲಿಸಲಾಯಿತು, ಸದರಿ ಪ್ರಸ್ತಾವನೆಗಳಲ್ಲಿ ತಿಳಿಸಿರುವ ಕಾಲೇಜುಗಳು ಸೇರಿದಂತೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:31/12/2015 ರೊಳಗೆ ನಿವೃತ್ತಿ, ಮರಣ, ರಾಜೀನಾಮೆ, ಹಾಗೂ ಇತರೆ ಕಾರಣಗಳಿಂದ ಖಾಲಿ ಆಗಿರುವ ಬೋಧಕ ಹುದ್ದೆಗಳನ್ನು ನಿಯಮಾನುಸಾರ ನಿಗಧಿತ ವಿದ್ಯಾರ್ಥಿಗಳ ಸಂಖ್ಯೆ ಮೀಸಲಾತಿ ಮತ್ತು ಅಗತ್ಯ ಕಾರ್ಯಭಾರದ ಆಧಾರದ ಮೇಲೆ ಈ ಕೆಳಕಂಡ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತ ಪಡಿಸಿಕೊಂಡ ನಂತರವೇ ನಿಯಮಾನುಸಾರವಾಗಿ ಭರ್ತಿ ಮಾಡಲು ಸರ್ಕಾರ ಸಹಮತಿಸಿದೆ ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದೆ:

1. ಪ್ರಸ್ತಾಪಿತ ಕಾಲೇಜನ್ನು ಈಗಾಗಲೇ ನಿಯಮಗಳನ್ನು ಪಾಲಿಸಿ ವೇತನಾನುದಾನಕ್ಕೆ ಒಳಪಡಿಸಿರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು.
2. ಪ್ರಸ್ತಾಪಿತ ಹುದ್ದೆ ಅನುದಾನ ಸಂಹಿತೆ ಹಾಗೂ ನಿಯಮಗಳ ಪ್ರಕಾರ ನಿಗದಿಪಡಿಸಿದ ಸಿಬ್ಬಂದಿ ಮಾದರಿ ಮಿತಿಯೊಳಗೆ ಇರಬೇಕು. ಇದನ್ನು ಈಗಾಗಲೇ ಮಂಜೂರು ಮಾಡಿದ ಹುದ್ದೆಗಳನ್ನು ಕಾಣಿಸಿ, ಈಗ ಮಂಜೂರು ಮಾಡಿದ ಹುದ್ದೆ ಸಹಿತ ಮಿತಿಯೊಳಗೆ ಇರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು.
3. ಮೀಸಲಾತಿ ಮತ್ತು ರೋಸ್ಟರ್ ಪಾಲಿಸಿರುವ ಬಗ್ಗೆ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು.
4. ಹುದ್ದೆಗಳಿಗೆ ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ, ಆಯ್ಕೆ ವಿಧಾನದಂತೆ ನೇಮಕಾತಿ ನಿಯಮಗಳನ್ನು ಪಾಲಿಸಿ, ಪಾರದರ್ಶಕವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.
5. ಹುದ್ದೆಗಳ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 146 ಯುಪಿಸಿ 1979, ದಿನಾಂಕ:03-10-1981ರ ಅಂಶಗಳನ್ನು ದಾಖಲೆಗಳ ಸಹಿತ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸತಕ್ಕದ್ದು.
6. ಇಲಾಖೆಗೆ ನಿಗದಿಪಡಿಸಿದ ಆಯವ್ಯಯದಿಂದಲೇ ಈ ಬಗ್ಗೆ ಬೇಕಾದ ಅನುದಾನ ಭರಿಸಿಕೊಳ್ಳಬೇಕು.

ಮೇಲಿನಂತೆ ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆ (ಕಾಲೇಜು ಶಿಕ್ಷಣ) ನಿಯಮಗಳು 2003ರಂತೆ ಕೂಲಂಕಷವಾಗಿ ಪರಿಶೀಲಿಸಿ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿನಾಂಕ:31/12/2015 ರೊಳಗೆ ನಿವೃತ್ತಿ, ಮರಣ, ರಾಜೀನಾಮೆ, ಹಾಗೂ ಇತರೆ ಕಾರಣಗಳಿಂದ ಖಾಲಿ ಆಗಿರುವ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಂಡು, ಕಾಲೇಜುವಾರು ಪ್ರತ್ಯೇಕ ಪ್ರಸ್ತಾವನೆಯನ್ನು ನಿಗಧಿತ ಚೆಕ್-ಲಿಸ್ಟ್‌ನೊಂದಿಗೆ ಎಲ್ಲಾ ಅಂಕಪಟ್ಟಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ/ವಿಶ್ವವಿದ್ಯಾಲಯಗಳಿಂದ ನೈಜತೆಯ ಬಗ್ಗೆ ಪರಿಶೀಲಿಸಿ ದೃಢೀಕರಿಸಿಕೊಂಡು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಮೇಲು ರುಜುವಿನೊಂದಿಗೆ ಇಲಾಖೆಯ ಸ್ಪಷ್ಟ ಅಭಿಪ್ರಾಯ ಹಾಗೂ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗಾಗಿ ಜರೂರಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳಿಸಿಕೊಡುವಂತೆ ಈ ಮೂಲಕ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 290 ವೆಚ್ಚ-8/2017 ದಿನಾಂಕ 28.07.2017 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ

ತಮ್ಮ ನಂಬುಗೆಯ,

1/9

(ಕೆ.ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

ಪ್ರತಿ:

ಎಲ್ಲಾ ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರವರ ಕಛೇರಿ ಬೆಂಗಳೂರು/ಮೈಸೂರು/ ಮಂಗಳೂರು/ಶಿವಮೊಗ್ಗ/ಧಾರವಾಡ/ಗುಲ್ಬರ್ಗ- ಮಾಹಿತಿಗಾಗಿ ಹಾಗೂ ಜರೂರು ಮುಂದಿನ ಸೂಕ್ತ ಕ್ರಮಕ್ಕಾಗಿ.